**OS: 115-15** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ **ಪಾಟೀ ಸವಾಲುಃ ಪ್ರತಿವಾದಿ 4 ರಿಂದ 6 ರ ಪರ ಶ್ರೀ ಎಸ್ ಆರ್ ಎ ವಕೀಲರಿಂದ ಃ**

ನಾವು ರಾಯ್ಕರ ವರಿಗೆ ದಿಃ 2.12.2009 ರಂದು ನೋಂದಾಯಿತ ಜಿ ಪಿ ಎ ಮಾಡಿಕೊಟ್ಟಿದ್ದೇವೆ ಅಂದರೆ, ನಾವು ಆ ರಾಯ್ಕರ ರವರನ್ನು ನೋಡಿಯೇ ಇಲ್ಲವೆಂದು ಸಾಕ್ಷಿಯು ಹೇಳುತ್ತಾರೆ. ಅದನ್ನು ನಮ್ಮ ತಂದೆ ಮಲ್ಲನಗೌಡ, ನನ್ನ ತಾಯಿ ಬಸವ್ವ, ನನ್ನ ತಮ್ಮ ರುದ್ರಗೌಡ ಹಾಗೂ ನಾನು ಮಾಡಿಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ಆ ಜಿ ಪಿ ಎ ಯನ್ನು ರದ್ದುಪಡಿಸಲು ನಾವು ದಾವೆ ಹಾಕಿಲ್ಲವೆಂದರೆ ಅದನ್ನು ಬರೆದುಕೊಟ್ಟಿದ್ದು ನನಗೆ ಗೊತ್ತಿಲ್ಲವೆಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಜಿ ಪಿ ಎ ಯನ್ನು ಮಾಡಿಕೊಟ್ಟಿದ್ದರೂ ಸಹಿತ ಮತ್ತು ಅದರ ಆಧಾರದ ಮೇಲೆ ಅವರು ಖರೀದಿ ಪತ್ರ ಮಾಡಿಕೊಟ್ಟಿದ್ದರೂ ಸಹಿತ ಮತ್ತು ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹಿತ ನಾನು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಖರೀದಿ ಪತ್ರ ದಿಃ 23.10.2010 ರಂದು ನೋಂದಾಗಿದೆ ಅಂದರೆ, ಆ ದಿನ ನನ್ನ ಡೆಲಿವರಿಯಾಗಿತ್ತು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಖರೀದಿ ಪತ್ರ ನೋಂದಾಗುವ ಮೊದಲು ಪ್ರತಿವಾದಿಗಳು 4 ರಿಂದ 6 ರವರು ಎಲ್ಲಾ ವಾದಿಯರ ಜೊತೆ ಮಾತುಕತೆ ಮಾಡಿದ್ದರು ಮತ್ತು ಪ್ರತಿವಾದಿ-1 ಮತ್ತು 2 ರವರ ಜೊತೆ ಸಹ ಮಾತುಕತೆ ಮಾಡಿದ್ದರು ಅಂದರೆ ಸರಿಯಲ್ಲ. ನಾವೆಲ್ಲರೂ ಅದರಲ್ಲಿ ಭಾಗವಹಿಸಿದ್ದೆವು ಅಂದರೆ ಸರಿಯಲ್ಲ. ಆ ಮಾತುಕತೆ ಕಾಲಕ್ಕೆ ನಾನು, ನನ್ನ ತಂದೆ ಮತ್ತು ತಾಯಿ ಹಾಗೂ ನನ್ನ ತಮ್ಮ ನಾವು ರಾಯ್ಕರ ಎನ್ನುವವರಿಗೆ ಜಿ ಪಿ ಎ ಮಾಡಿಕೊಟ್ಟ ಬಗ್ಗೆ ಹೇಳಿದ್ದೆವು ಅಂದರೆ ಸರಿಯಲ್ಲ. ಆಗ ನೋಂದಾಯಿತ ಜಿ ಪಿ ಎ ಯನ್ನು ಸಹ ಪ್ರತಿವಾದಿ 4 ರಿಂದ 6 ರವರು ಪರಿಶೀಲನೆ ಮಾಡಿದ್ದರು ಅಂದರೆ ಸರಿಯಲ್ಲ. ಆ ಜಿ ಪಿ ಎ ಯನ್ನು ನಾವು ಒಪ್ಪಿಕೊಂಡ ಪ್ರತಿವಾದಿ-4 ರಿಂದ 6 ರವರು ಆ ಆಸ್ತಿಯನ್ನು ಖರೀದಿ ಮಾಡಲು ಒಪ್ಪಿ ಮುಂದುವರೆದರು ಅಂದರೆ ಸರಿಯಲ್ಲ. ಅದು ಪಿತ್ರಾರ್ಜಿತ ಆಸ್ತಿ ಇದೆ ಎಂದು ಸಹ ನಾವು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೆವು ಅಂದರೆ ಸರಿಯಲ್ಲ.

**OS: 115-15** **PW-1**

ಜಿ ಪಿ ಎ ಇದ್ದರೂ ಸಹಿತ ಪ್ರತಿಫಲದ ಹಣವನ್ನು ಅವರು ನಮ್ಮ ವೈಯಕ್ತಿಕ ಹೆಸರಿನಲ್ಲಿ ಚೆಕ್ಕ ಮೂಲಕ ನಮ್ಮ ಖಾತೆಗೆ ಹಾಕಿದ್ದಾರೆ ಅಂದರೆ ಅದರ ಬಗ್ಗೆ ಅಣ್ವೇಕರ ರವರಿಗೆ ಗೊತ್ತು, ಅದರ ಬಗ್ಗೆ ಗೊತ್ತಿಲ್ಲವೆಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಎಲ್ಲಾ ಪಾಸ್ ಬುಕ್ ಗಳನ್ನು ಅಣ್ವೇಕರ ರವರು ಇಟ್ಟುಕೊಂಡಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಎಲ್ಲಾ ಚೆಕ್ ಗಳನ್ನು ನಾವೇ ನಗದೀಕರಿಸಿಕೊಂಡಿದ್ದರೂ ಸಹಿತ ಈಗ ಅಣ್ಣೆವೇಕರ ರವರ ಮೇಲೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಬ್ಯಾಂಕುಗಳಿಗೆ ನೋಟಿಸು ಕೊಟ್ಟಿದ್ದೆವು ಎಂದು ಸಾಕ್ಷಿಯು ಸ್ವತಃ ಉತ್ತರಿಸುತ್ತಾರೆ. ಅವುಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇವೆ. ಆ ಚೆಕ್ ಗಳು ಯಾರು ಕೊಟ್ಟಿದ್ದರು ಎಂದು ಪ್ರಶ್ನಿಸಿ ನಾವು ಬ್ಯಾಂಕಿಗೆ ನೋಟಿಸು ಕೊಟ್ಟಿದ್ದೆವು. ನಾವು ಆ ರೀತಿ ಯಾವುದೇ ನೋಟಿಸು ಕೊಟ್ಟಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖ್ಲೆಗಳನ್ನು ಸಹ ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ, ಆದರೂ ಸಹಿತ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆ ಖರೀದಿ ಪತ್ರದ ಮಾರುಕಟ್ಟೆ ಮೌಲ್ಯ ನಮ್ಮೆಲ್ಲರ ಸಮಕ್ಷಮವೇ ಠರಾಯಿಸಲಾಗಿದೆ ಅಂದರೆ ಸರಿಯಲ್ಲ. ನಾವೆಲ್ಲರೂ ಪ್ರತ್ಯೇಕವಾಗಿ ಹಣ ಮತ್ತು ಚೆಕ್ ಗಳನ್ನು ಪಡೆಯುವ ಕುರಿತು ಸಹ ನಿರ್ಧರಿಸಲಾಗಿತ್ತು ಅಂದರೆ ಸರಿಯಲ್ಲ. ನಮ್ಮ ಕುಟುಂಬವನ್ನು ಬಿಟ್ಟು ಉಳಿದವರೆಲ್ಲರೂ ನೋಂದಾಯಿತ ಖರೀದಿ ಪತ್ರ ಬರೆದುಕೊಡಲು ಖುದ್ದಾಗಿ ಬರಬೇಕೆಂದು ಮಾತುಕತೆಯಾಗಿತ್ತು ಅಂದರೆ ಸರಿಯಲ್ಲ. ಆ ಮಾತುಕತೆಯ ಪ್ರಕಾರ ಈ ಪ್ರತಿವಾದಿಗಳು ಪ್ರತಿಫಲದ ಹಣ ಮುಟ್ಟಿಸಿದ್ದಾರೆ ಅಂದರೆ ಸರಿಯಲ್ಲ. ಆ ಎಲ್ಲಾ ಮಾತುಕತೆಯ ಬಗ್ಗೆ 3 ನೇ ಪ್ರತಿವಾದಿ ಖುರ್ಷಿದ ರವರಿಗೆ ತಿಳಿದು ಬಂದ ನಂತರ ಅವರು ನಮ್ಮೆಲ್ಲರ ಮೇಲೆ ದಿಃ 06.10.2010 ರಂದು ಅಸಲು ದಾವೆ ನಂಃ 217-2010 (Specific Performance Contract) ದಾವೆ ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿದೆ.

**OS: 115-15** **PW-1**

ಎಫ್ ಡಿ ಪಿ ನಂಃ 37-2011 ನ್ನು 2010 ರಲ್ಲಿ ಹಾಕಿದ್ದೆವು. ಅದು 2012 ರಲ್ಲಿ ರಾಜಿಯಾಯಿತು ಅಂದರೆ ಹೌದು. ಆ ಎಫ್ ಡಿ ಪಿ ಯಲ್ಲಿ ಈ ಪ್ರತಿವಾದಿಗಳು ಖರೀದಿಸಿದ ಆಸ್ತಿಯನ್ನು ಅರ್ಜಿ ಸಲ್ಲಿಸಿ ಸೇರಿಸಲಾಗಿತ್ತು ಅಂದರೆ ಸರಿ. ಅದರಲ್ಲಿ ನಾನು 6 ನೇ ಅರ್ಜಿದಾರಳಿದ್ದೆನು ಅಂದರೆ ಸರಿ. ಆ ಆಸ್ತಿಯನ್ನು ಅಲ್ಲಿ ಸೇರಿಸುವ ಕಾಲಕ್ಕೆ ಅದನ್ನು ಮಾರಾಟ ಮಾಡಲಾಗಿತ್ತು ಅಂದರೆ ಸಾಕ್ಷಿಯು, ಅದು ಮಾರಾಟ ಮಾಡಿದ ಬಗ್ಗೆ ಗೊತ್ತಾದ ನಂತರ ನಾವು ಆ ಆಸ್ತಿಯನ್ನು ಅಲ್ಲಿ ಸೇರಿಸಿದ್ದೆವು. ಆ ಆಸ್ತಿಯ ಬಗ್ಗೆ ರಾಜಿ ಮಾಡಿಕೊಳ್ಳಲು ನಮಗೆ ಯಾವುದೇ ಅಧಿಕಾರವೇ ಇರಲಿಲ್ಲ ಏಕೆಂದರೆ ನಾವು ಅದನ್ನು ಈ ಮೊದಲೇ ಮಾರಾಟ ಮಾಡಿದ್ದೆವು ಅಂದರೆ ಸರಿಯಲ್ಲ. ನಾವು ಆ ಆಸ್ತಿಯ ಮಾಲಿಕರಿದ್ದೇವೆ ಎಂದು ನ್ಯಾಯಾಲಯದ ಕಣ್ಣಿಗೆ ಮಣ್ಣೆರಚಿ ಅಂದರೆ ಸುಳ್ಳು ಹೇಳಿ ಆ ಆಸ್ತಿಯನ್ನು ರಾಜಿ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದು ಗೊತ್ತಿದ್ದರೂ ಸಹಿತ ನಾವು ಆ ಆಸ್ತಿಯ ಬಗ್ಗೆ ರಾಜಿ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆ ಆಸ್ತಿಯ ಬಗ್ಗೆ ರಾಜಿ ಮಾಡಿಕೊಳ್ಳಲು ಯಾವುದೇ ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ.

ಗಜಾನನ ಅಣ್ವೇಕರ ಇವರು ಆ ಖರೀದಿ ಪತ್ರಕ್ಕೆ ಸಾಕ್ಷಿ ಎಂದು ಸಹಿ ಮಾಡಿಲ್ಲವೆಂದರೆ, ಸಾಕ್ಷಿಯು ಖರೀದಿ ಪತ್ರ ನೋಡಿ ಹೇಳಬಲ್ಲೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ನಿಪಿ.9 ರಿಂದ 11 ಖರೀದಿ ಪತ್ರಗಳನ್ನು ನೋಡಿ ಅದರ ಮೇಲಿರುವ ಗಜಾನನ ಅಣ್ವೇಕರ ಇವರು ಸಾಕ್ಷಿ ಎಂದು ಸಾಕ್ಷಿ ಮಾಡಿದ್ದಾರೆಂದು ಉತ್ತರಿಸುತ್ತಾರೆ. ಈ ಖರೀದಿ ಪತ್ರಕ್ಕಿಂತಲೂ ಮೊದಲು ಸಹ ನನ್ನ ದೊಡ್ಡಪ್ಪ ಒಂದನೇ ಪ್ರತಿವಾದಿಯಿಂದ ಗಜಾನನ ಅಣ್ಣೇಕರ ಇವರು ತನ್ನ ಹೆಂಡತಿ ಹೆಸರಿನಲ್ಲಿ ಇದೇ ಆಸ್ತಿಯನ್ನು ಖರೀದಿ ಪತ್ರ ಬರೆಸಿಕೊಂಡಿದ್ದರು ಎಂದು ಸಾಕ್ಷಿಯು ಸ್ವತಃ ಉತ್ತರಿಸುತ್ತಾರೆ.

ನಾವು 4 ರಿಂದ 6 ನೇ ಪ್ರತಿವಾದಿಗಳಿಗೆ ಕಾನೂನುಬದ್ಧವಾಗಿ ಖರೀದಿ ಪತ್ರ ಮಾಡಿಕೊಟ್ಟಿದ್ದರೂ ಸಹಿತ ಈಗ ಅವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಅಣ್ವೇಕರ ರವರ ಹೆಸರು ಹೇಳುತ್ತಾ, ಈಗ 4 ರಿಂದ 6 ನೇ ಪ್ರತಿವಾದಿಗಳಿಗೆ ಮೋಸ ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ. ಈ ಪ್ರತಿವಾದಿಗಳು ನಮಗೆ ಕಾನೂನುಬದ್ಧವಾಗಿ ನಮಗೆ ಪ್ರತಿಫಲದ ಹಣ ಕೊಟ್ಟು ಖರೀದಿ ಪತ್ರ ಮಾಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ.

**OS: 115-15** **PW-1**

ನಿಜಾಂಶ ಎಲ್ಲಾ ಗೊತ್ತಿದ್ದರೂ ಸಹಿತ ಈಗ ಇನ್ನೂ ಹೆಚ್ಚಿನ ಹಣ ಪಡೆಯಬೇಕೆಂಬ ದುರುದ್ದೇಶದಿಂದ ಈ ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ. ಖರೀದಿ ಪತ್ರವಾದ ದಿನದಂದೆ ಆ ಆಸ್ತಿಗಳ ಸ್ವಾಧೀನತೆಯನ್ನು ಖರೀದಿದಾರರಿಗೆ ಕೊಟ್ಟಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.